doc-33
T.P-2

Rega No M 1229 | 43rd Year | Sri 'Satyavadi' Mysore | 15—4—1959

ಸಮಸ್ತ ಗ್ರಾಹಕರುಗಳಿಗೆ
ಬಂಧುಗಳಿಗೆ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಆರಮನೆ ಸಿಂಸ್ಕೇವಾರ್ ಎಂ. ವಿ ಸುಬ್ಬರಾಯುರು [ಬೆಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ರಷ್ಯವನ್ನು ಅಮೇರಿಕಾ ಯುದ್ಧದಲ್ಲಿ ನಾಶಮಾಡಬಲ್ಲದು !

ಅರಿಜೋನಾ 14— ಯುದ್ಧದಲ್ಲಿ ರಷ್ಯವನ್ನು ನಾಶಮಾಡಬಲ್ಲದೆಂದೂ, ಇದು ರಷ್ಯಾಕ್ಕೆ ಗೊತ್ತಿದೆಯೆಂದೂ ಅಮೇರಿಕಾದ ನೌಕಾದಳದ ಮುಖ್ಯಾಧಿಕಾರಿ ಅಡ್ಮಿರಲ್ ಆರ್ಲೆ ಬುರ್ಕ್ ಹೇಳಿದರು ; ರಷ್ಯವು ಅಮೇರಿಕಾ ಮೇಲೆ ಅನಿರೀಕ್ಷಿತವಾಗಿ ಅಮೇರಿಕಾ ಮೇಲೆ ಬಿದ್ದರೂ ಅಮೇರಿಕಾ ಯುದ್ಧದಲ್ಲಿ ಗೆಲ್ಲುವ ಶಕ್ತಿ ಹೊಂದಿರುವುದೆಂದೂ ಅವರು ನ್ಯಾಷನಲ್ ಪಬ್ಲಿಕೇರ್ಸ್ ಕ್ಲಬ್‌ನಲ್ಲಿ ಹೇಳಿದರು.

ತಟಸ್ಥ ಸರ್ಕಾರ ಬೇಕು

ಲಾಹೋರು 14— ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರಕ್ಕೆ ನಿಷ್ಪಕ್ಷಪಾತ ಮತ್ತು ತಟಸ್ಥ ಸರಕಾರ ಸ್ಥಾಪಿತವಾಗಬೇಕೆಂದು ರಾಜಕೀಯ ಕಾರ್ಯಕರ್ತ ಅಬ್ದುಲ್ ಅಜೀತ್ ಹೇಳಿರುವನು.

ಗೃಹ ಮಂತ್ರಿಗಳ ಹೇಳಿಕೆ

ನವದೆಹಲಿ 14— ಪಾಕಿಸ್ತಾನವು ಹೊಡೆದುರುಳಿಸಿದ ವಿಮಾನದ ಪೈಲೆಟ್ ಅಗರ್ತಲಾ ನ್ಯಾಯಕೋರ್ಟಿನಲ್ಲಿ ಹೇಳಿಕೆ ಕೊಡುವ ಸ್ಥಿತಿಯಲ್ಲಿರಲಿಲ್ಲವೆಂದು ಕೇಂದ್ರ ಗೃಹ ಮಂತ್ರಿ ಕೃಷ್ಣ ಮೆನನ್ ಲೋಕಸಭೆಯಲ್ಲಿ ಹೇಳಿದರು — ಇವರು ತುಂಬಾ ಗಾಯಗೊಂಡಿದ್ದು ದೈಹಿಕ ಮಾನಸಿಕ ಆರೋಗ್ಯ ಸ್ಥಿತಿಯಿಂದ ಕೂಡಿದ್ದ 3-4 ದಿನಗಳು ಅವರು ಶಂಟಿಗೆ ಹೋಗುವಂತಿಲ್ಲವೆಂದರು — ಜೀವಭಯವಿಲ್ಲದಿದ್ದರೂ ಅವರು ಕೆಲಸಕ್ಕೆ ಲಾಯಕ್ಕಾಗಬೇಕಾದರೆ ಅನೇಕ ತಿಂಗಳುಗಳು ಹಿಡಿಯುತ್ತದೆಂದೂ ಹೇಳಿದರು.

ಕಮ್ಯುನಿಸ್ಟರ ಹಿಡಿತ ತಪ್ಪಿಸಲು

ವಾಷಿಂಗ್ಟನ್ 14— ಕಮ್ಯುನಿಸ್ಟು ಪಕ್ಷಕ್ಕೆ ಸೇರಿದ ದೇಶಗಳಿಗೆ ಸಹಾಯ ನೀಡಿ ಕಮ್ಯುನಿಸ್ಟ್ ಅವರನ್ನು ಅಧಿಕಾರ ಹಿಡಿತದಿಂದ ತಪ್ಪಿಸುವಂಥ ಮಸೂದೆಯು ಸೆನೇಟು ಮುಂಡೆ ಮಂಡಿಸಲಾಯಿತು.

ನೇತಾಜಿ ಭಾಷಣಗಳು

ನವದೆಹಲಿ 14 — ನೇತಾಜಿ ಸುಭಾಷ್ ಚಂದ್ರ ಬೋಸ್‌ರ ಭಾಷಣಗಳು ಮತ್ತು ಲೇಖನಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಸಿದ್ಧಪಡಿಸುವ ಬಗ್ಗೆ ನೆಹರೂ ಸಲಹಾ ಸಮಿತಿ ರಚಿತವಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ದಸ್ತಗಿರಿ

ಕಲ್ಕತ್ತಾ 13— ಕಲ್ಕತ್ತಾ ರೇವಿನಲ್ಲಿ ಬಂದಿಳಿದಿರುವ ವಿದೇಶೀ ಹಡಗುಗಳಲ್ಲಿನ ವಿವಿಧ ದೇಶಗಳ 23 ನಾವಿಕರನ್ನು ಪೋಲೀಸರು ನಗರದ ಮಧ್ಯಭಾಗದಲ್ಲಿರುವ ಒಂದು ಹೋಟಲಿನಲ್ಲಿ ದಸ್ತಗಿರಿ ಮಾಡಿದರು — ಹೋಟಲು ಮಾಲೀಕನನ್ನು ಅಬ್ಕಾರಿ ರೂಲ್ಸ್ ಮೀರಿ ದಸ್ತಗಿರಿ ಮಾಡಲ್ಪಟ್ಟ ಜಾಮೀನಿನ ಮೇಲೆ ಬಿಡಲ್ಪಟ್ಟನು.

ಗೌರವ ಪೌದಾರ್ಯ

ಕೊಲ್ಹೇಗಾಲ — ತಳಿಬೆಟ್ಟದಲ್ಲಿ ಒಂದು ಚಕ್ರಕಟ್ಟಲು ಗೌರವರು 70 ಸಾವಿರ ರೂಗಳನ್ನು ಕೊಡುವದಾಗಿಯೂ ಮಹದೇಶ್ವರ ಬೆಟ್ಟಕ್ಕೆ ವಿದ್ಯುದ್ದೀಪ ಹಾಕಲು 20 ಸಾವಿರ ರೂಗಳನ್ನೂ ವಾಗ್ದಾನ ಮಾಡಿರುವರು — ಗೌರವರ ಸೆಕ್ರೆಟರಿ ಶ್ರೀ ಮಹದೇವಯ್ಯನವರೂ 50 ಸಾವಿರ ರೂಗಳನ್ನು ಉದಾರವಾಗಿ ವಾಗ್ದಾನ ಮಾಡಿರುವರು.

ಶಿವಾಜಿ ಗಣೇಶರ ದಾನ

ಮದರಾಸು 14 — ಖ್ಯಾತ ಚಲನಚಿತ್ರ ನಟ ಶಿವಾಜಿ ಗಣೇಶರ್ ಮದರಾಸು ಮೇಯರರ ಅಡಮುಕ್ಕಳ ಅಪಸವಸನ ಫಂಡಿಗೆ 1 ಲಕ್ಷ ರೂಗಳ ಚೆಕ್ಕನ್ನು ರಾಜಭವನದಲ್ಲಿ ಒಳದು ಬಿಳ್ಳಿ ಕರಂಡದಲ್ಲಿಟ್ಟು ಪಂ || ನೆಹರೂರಿಗೆ ಕೊಟ್ಟರು ; ಪಂ || ನೆಹರೂರು ಮೇಯರರ ಸ್ವೀಕರಿಸಿ ಪ್ರಶಂಸಿಸಿದರು — ನಂತರ ಖಾಲಿ ಕರಂಡವನ್ನು ಹರಾಜುಹಾಕಿ ಬಂದ 2001 ರೂಗಳನ್ನು ಮೇಯರರ ಫಂಡಿಗೆ ಕೊಟ್ಟರು.

ಸುದ್ದಿಗಳು

1958 ರಿಂದ ಈ ಫೆಬ್ರವರಿವರೆಗೆ ಭಾರತಕ್ಕೆ 67,0862 ಮಂದಿ ಪಾಕಿಸ್ತಾನ ರಾಷ್ಟ್ರೀಯರು ಭೇಟಿಯಿತ್ತಿರುವರು.

— × —

ಖಟ್ಮಂಡು 14— ಈಚಿನ ಟಿಬೆಟ್ಟಿನಲ್ಲಿ ಹೊಡೆದಾಟದಲ್ಲಿ ಲಾಸಾದಲ್ಲಿನ ನೆಪಾಳಿ ರಾಯಭಾರಿ ಕಚೇರಿ ಕಟ್ಟಡವು ತುಂಬಾ ಡ್ಯಾಮೇಜುಗೊಂಡಿದೆ.

ಂ ಂ

ಲಂಡನ್ 14— ಹೈದರಾಬಾದು ನೈಜಾಮರ ಮೊಮ್ಮಗನೂ ಅವರ ಉತ್ತರಾಧಿಕಾರಿಯೂ ಆದ ಮುಕರ್ರಂಜಾ ಲಂಡನ್ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ 21 ವರ್ಷದ ಜೇನ್ ಬಿರ್ಗೀನೆಂಬ ಟರ್ಕಿ ಹುಡುಗಿಯನ್ನು ಮದುವೆಯಾದರು.

ಂ ಂ

ವಾರಣಾಸಿ 13—ಪ್ರತಿಬಂಧಕಾಜ್ಞೆ ಉಲ್ಲಂಘಿಸಿದ 10 ಮಂದಿ ಹಿಂದೂ ಮಹಾ ಸಭೆಯ ಕಾರ್ಯಕರ್ತರು ಬಂಧಿಸಲ್ಪಟ್ಟರು.

ಂ ಂ

ವಿಜಯವಾಡ 12— ಲಾಯರುಗಳು ಸಾರ್ವಜನಿಕ ಚಟುವಟಿಕೆಯಲ್ಲಿ ಭಾಗವಹಿಸಿ, ಜನತೆ ಪುರೋಭಿವೃದ್ಧಿಗೆ ಸೇವೆ ಸಲ್ಲಿಸಬೇಕೆಂದು ಕೇರಳ ರಾಜ್ಯಪಾಲ ರಾಮಕೃಷ್ಣರಾಯರು ಹೇಳಿದರು.

ಮದರಾಸು 14— ಒಂದು ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ, 4 ದಿನಗಳ ಹಿಂದೆ ನಿಶ್ಶಸ್ತ್ರ ವಿಮಾನಕ್ಕೆ ಶೂಟ್ ಮಾಡಿ ಕೆಡವಿರುವುದು ಪ್ರಪಂಚದಲ್ಲಿ ಸಮಾಧಾನವಿಲ್ಲದ್ದೆಂದೂ, ಶಾಂತಿಕಾಲದಲ್ಲಿ ಯೂರೋಪಿನ ಶೀತಳಯುದ್ಧ ಗಡಿ ಹೊರ್ತು ಎಲ್ಲೂ ನಡೆದಿಲ್ಲವೆಂದೂ ಪಂ|| ನೆಹರೂ ಹೇಳಿದರು — ಆದರೂ ನಾವು ನಮ್ಮ ಮನೋಭಾವ ಮತ್ತು ತಾಳ್ಮೆ ಕಳೆದುಕೊಳ್ಳದೆ, ಶಾಂತಿಂತಾಗದಿದ್ದೇವೆ; ಇದು ಪಾಕಿಸ್ತಾನಿ ಜನತೆ ತಪ್ಪಲ್ಲ : ಹೇಗೆ ಅವರ ಅಧಿಕಾರಿಗಳೂ ಅವರ ಕೈಕೆಳಗಿನವರೂ ಬಂದೂಕದ ಮೇಲೆ ಕೈಯಿಟ್ಟಿರುವದನ್ನು ತೋರಿಸುತ್ತದೆ ಎಂದೂ ಹೇಳಿದರು.

ಎಂ ಪಿ ಗಳ ಶಂಕೆ

ನವದೆಹಲಿ 14— 2 ದಿನಗಳ ಹಿಂದೆ ಒಂದು ಕೂಚ್ ಬಿಹಾರು ಗ್ರಾಮಕ್ಕೆ ಪಾಕಿಸ್ತಾನಿಗಳ ಹೆಚ್ಚು ಮಂದಿ ನುಗ್ಗಿದ್ದರ ಬಗ್ಗೆ ಲೋಕಸಭೆಯಲ್ಲಿ ವಿರೋಧ ಪಕ್ಷದ ಅನೇಕರು ತೀವ್ರ ಶಂಕೆ ವ್ಯಕ್ತಪಡಿಸಿದರು — ಸರಕಾರವೂ ತಮ್ಮ ಪಕ್ಷವೂ ಈ ಶಂಕೆಯಲ್ಲಿ ಭಾಗಿಗಳೆಂದೂ ಗಡಿ ರಕ್ಷಣೆಗೆ ಅವಶ್ಯವಾದ ಎಲ್ಲಾ ಕ್ರಮಗಳನ್ನೂ ಕೈಕೊಳ್ಳಲಾಗಿದೆಯೆಂದೂ ಗೃಹಮಂತ್ರಿ ಪಂತರು ತಿಳಿಸಿದರು.

ಒಂದಕ್ಕೊಂದು ಅಧೀನವಿಲ್ಲ

ಆಗಸ್ಟ್ 11— ಕಾಂಗ್ರೆಸ್ಸು ಸಂಸ್ಥೆಯೂ, ಸಂಕಾರವೂ ತಿಮ್ಮತಿವು ಸ್ಥಾನಗಳನ್ನು ಹೊಂದಿದ್ದು, ಒಂದು ಇನ್ನೊಂದರ ಅಧೀನವಾಗಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷಣೆ ಇಂದಿರಾ ಗಾಂಧಿ ಹೇಳಿದರು.

ರಷ್ಯಾ ಅನುವಾದ

ಮಹಾಭಾರತ ಸಂಸ್ಕೃತ ಮೂಲದಿಂದ ಆಯ್ದುಕೊಳ್ಳಲಾದ ಎರಡು ಕಾವ್ಯಭಾಗಗಳ ರಷ್ಯ ಅನುವಾದವು ನಾಲ್ಕು ವರ್ಷಗಳ ಹಿಂದೆ ಪ್ರಕಟವಾಗಿ ರಷ್ಯಾದ ಪುಸ್ತಕಾಲಯಗಳಲ್ಲಿ ಕಂಡುಬಂದಿತು

ಖಜಾಂಚಿಗೆ ಸಜಾ

ನವದೆಹಲಿ 14— ಮಣಿಪುರದ ಸ್ಟೇಟ್ ಟ್ರಾನ್ಸ್‌ಪೋರ್ಟಿನ ಖಜಾಂಚಿಯು 1647 ರೂಗಳಷ್ಟು ಹಣವನ್ನು ದುರುಪಯೋಗಮಾಡಿಕೊಂಡಿದ್ದಕ್ಕಾಗಿ 18 ತಿಂಗಳ ಸಶ್ರಮಶಿಕ್ಷೆ ಮತ್ತು 200 ರೂಗಳ ದಂಡವನ್ನು ವಿಧಿಸಲಾಗಿದೆ.

13 ಅಂತಸ್ತಿನ ವಿಶ್ವವಿದ್ಯಾನಿಲಯ ಕಟ್ಟಡ

ಖಾರ್ಕೋವ್ 2— ಉಕ್ರೇನಿನ ಖಾರ್ಕೋವ್ ನಗರದಲ್ಲಿ ಮೂರು ಲಕ್ಷ ಘನಮೀಟರುಗಳಿಗಿಂತಲೂ ಹೆಚ್ಚಿನ ಪ್ರಮಾಣದ ಹದಿಮೂರು ಅಂತಸ್ತುಗಳ ಹೊಸ ವಿಶ್ವವಿದ್ಯಾನಿಲಯದ ಕಟ್ಟಡವು ಸಿದ್ಧವಾಗುವುದು: ಅದರಲ್ಲಿ ಹತ್ತು ಶಾಖೆಗಳಿರುವವು; ಅದರ ಉಪನ್ಯಾಸಮಂದಿರಗಳಲ್ಲಿಯೂ ಪ್ರಯೋಗಶಾಲೆಗಳಲ್ಲಿಯೂ ಏಕ ಕಾಲದಲ್ಲೇ 5000 ಜನರಿಗೆ ಸ್ಥಳಾವಕಾಶವಿರುವುದು.

ಶ್ರೀ ಕೆಂಗೇಗೌಡರಿಗೆ ಸತ್ಕಾರ

ಮೈಸೂರಿನ ಪೌರಸಭಾಧ್ಯಕ್ಷರಾದ ಶ್ರೀ ಬಿ ಎಸ್ ಕೆಂಗೇಗೌಡರಿಗೆ ಸಂತೇಪೇಟೆ ವರ್ತಕರು, ಶ್ರೀರಂಗಪಟ್ಟಣದಲ್ಲಿರುವ ದಿವಾನ್ ಕೃಷ್ಣಮೂರ್ತಿಯವರ ಬಂಗ್ಲೆಯಲ್ಲಿ ಭಾನುವಾರ ಭಾರಿ ಸತ್ಕಾರ ನಡೆಸಿದರು

ಜಾತೀಯತೆಯು ನ್ಯಾಯಖಾತೆಯಲ್ಲಿಯೂ ಸೇರಿತೆ?

ಮೈಸೂರು ಹೈ ಕೋರ್ಟಿನವರು ಸಿವಿಲ್ ಜಡ್ಜರ ಸ್ಥಳಗಳನ್ನು ತುಂಬುವ ಕುರಿತು ಉಮೇದುವಾರರನ್ನು ಸಂದರ್ಶನಕ್ಕೆ ಕರೆವಿದ್ದರು; ಸಂದರ್ಶನ ಕಾಲಕ್ಕೆ ಉಮೇದುವಾರರಿಗೆ ಅವರ ಜಾತಿ ಯಾವುದೆಂಬುದನ್ನು ಕೇಳುತ್ತಿದ್ದರೆಂದು ಉಮೇದುವಾರರು ತಕರಾರು ಮಾಡುತ್ತಾ ಮತ್ತು ನಿರಾಶರಾಗಿ ಹಿಂದುರುಗಿ ಬಂದರೆಂದು ವಾರ್ತೆ ಇದೆ. ಶಾಲೆಕಾಲೇಜುಗಳಲ್ಲಿ ಪ್ರವೇಶ ಕೊಡುವಾಗ್ಗೆ ವಿಶಿಷ್ಟ ಜಾತಿಯವರಿಗೆ ಪ್ರವೇಶದೊರೆಯದ್ದರಿಂದ ಅಂಥವರು ಇದೇ ಹೈ ಕೋರ್ಟಿಗೆ ರಿಟ್ ಅರ್ಜಿ ಮಾಡಿಕೊಂಡು ತಮಗೆ ಆದ ಅನ್ಯಾಯವನ್ನು ದೂರುಮಾಡಿಕೊಂಡ ಉದಾಹರಣೆಗಳುಂಟು. ಆದರೆ ಹೈ ಕೋರ್ಟಿನವರು ತಮ್ಮ ಖಾತೆಯಲ್ಲಿ ಸಹ ಜಾತಿಯನ್ನು ವಿಚಾರಿಸಹತ್ತಿದ್ದರೆ ನ್ಯಾಯವು ಯಾರಿಂದ ದೂರೆಯಬೇಕೆಂಬುದರ ಬಗ್ಗೆ ಸಾಮಾನ್ಯಜನರಿಗೆ ವಂಚನೆಯಾದಲ್ಲಿ ಆಶ್ಚರ್ಯವೇನು? (ಸಂದೇಶ)

ಗೋಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೊಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುಸೈದ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ

ಪೋಷಕರು ರೂ 25, ಜೊಬಲಿಗರು ರೂ 10 (ಒಂದೇ ಸಾರಿ)

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾ ರ್ಮ ಸಿ

ಅಶೋಕ್‌ರೋಡ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nurala M S Krishna Rao, at the Satyavadi Press Chamarajapuram, Mysore

ಅಪೆರಾ— ಜಯಪ್ರದ 2 ನೇ ವಾರ

ಸಕಲರೂ ನೋಡಬೇಕಾದ ಮಹೋನ್ನತ ಪೌರಾಣಿಕ ಚಿತ್ರ

ಸತೀ ತುಳಸಿ ತೆಲುಗು

ಪಾತ್ರ— ಎಸ್ ವುಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುವ್ವಡಿ

ಪ್ರತಿದಿನ 3 ಆಟಗಳು

ವುಡ್‌ಲಾಂಡ್ಸ್ ಜನಭರಿತ 2 ನೇ ವಾರ

ಮಿಸ್. ಬಿ ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಕೊತೆ

ದಿಗ್ದರ್ಶನ: ಋಷಿಕೇಷ್ ಮುಖರ್ಜಿ

ಸಂಗೀತ: ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]

ಸಸ್ಯಶಾಸ್ತ್ರ ಸಂಬಂಧದ ಪರೀಕ್ಷೆ

Shree Cycle Mart

Jagonmohan Palace Road, MYSORE

Good cycles for hire — Repairs undertaken
Overhauling a speciality — Moderate charges
Excellent workmanship — Prompt attention